ಹೆಚ್ಚು. ಸದಾ ಹುಡುಗಿಯರ ನಡುವೆಯಿದ್ದರೂ ಸಂಗೀತಕ್ಕೆ ನಿಷ್ಠನಾಗಿರುವ, ಸಂಗೀತದ ಬಗ್ಗೆ ಮಾತ್ರ ಆಸಕ್ತಿ ತೋರುವ ಹುಡುಗನ ಸರೋವರದಂತಹ ಮನಸ್ಸೀಗ ಅದೊಂದು ಹುಡುಗಿಯ ಎಂಟ್ರಿಯಿಂದಾಗಿ ಕದಡಿ ರಾಡಿಯಾಗಿದೆ. ಆ ಹುಡುಗಿ ಮಂದಸ್ಮಿತಾನೋ, ಸೀತಾನೋ, ಗೀತಾನೋ ಏನೋ ಒಂದು; ನೋಡಿದರೆ ಲಂಗ ಬ್ಲೌಸ್‌ನ ಹುಡುಗಿಯಂತೆ ಕಾಣಿಳು. ತುಂಬಿ ತುಳುಕುವ ಅವಳು ಕನಿಷ್ಠ ಚೂಡಿದಾರ್ ತೊಡಬಹುದಿತ್ತೇನೋ. ಸೀರೆ ಉಟ್ಟರಂತೂ ಭರ್ಜರಿ ಕಾಣುವಳೇನೋ. ಸೀರೆ ಉಟ್ಟರೆ ವಯಸ್ಸಾಗಿದೆಯೆಂದು ಅಂದುಕೊಂಡರೆ ಎಂಬ ಕಾಲಭೀತಿ. ಹೀಗಾಗಿ ಹುಡುಗೀರು ಸ್ಯಾರಿವೇರ್ ಏನಿದ್ದರೂ ಮ್ಯಾರೇಜ್ ಪರಪಸ್‌ಗೆ ಅಂದುಕೊಳ್ಳುವಂತಾಗಿದೆ. ಜರೀ ಲಂಗ ರೇಷ್ಮೆ ಬ್ಲೌಸಿನಲ್ಲಿ ಮಿಂಚುತ್ತಾ ಬರುವ ಹುಡುಗಿಯ ಬ್ಲೌಸ್ ಹರಿದು ಹೊರಬರುವಂತಿರುವ ಅವುಗಳನ್ನು ನೋಡಲಾರದೆ ನೋಡದಿರಲಾರದೆ ಹುಡುಗನ ತಪೋಭಂಗವಾಗಿ ವೀಣೆಯ ಮೇಲಿನ ಬೆರಳುಗಳು ವೀಣೆಗಿಂತ ಹೆಚ್ಚು ಕಂಪಿಸುತ್ತವೆ. ದಷ್ಟಪುಷ್ಟ ಹುಡುಗಿಯ ಮುಂದವನು ಚಿಕ್ಕವನಂತೆಯೇ ಭಾಸವಾಗುತ್ತಾನೆ. ಅವನಿನ್ನು ಎಳೆಸೌತೆಕಾಯಿ. ಹುಡುಗಿಯರನ್ನು ಕಣ್ಣು ಮಿಟುಕಿಸದೇ ನೋಡುವ, ಮಾತನಾಡಿಸುವ ಖಯಾಲಿಗಷ್ಟೇ ಸೀಮಿತ. ಮೊದಮೊದಲು ಪಾಠ ಹೇಳಿಸಿಕೊಂಡು ಲಂಗ ಕೊಡವಿ ಎದ್ದು ಹೋಗುತ್ತಿದ್ದವಳೀಗ ಪಾಠ ಮುಗಿದರೂ ವೀಣೆ ನುಡಿಸುವುದನ್ನೋ ವೀಣೆ ನುಡಿಸುವ ಅವನನ್ನೇ ನೋಡುತ್ತಾ ಕೂತು ಬಿಡುತ್ತಾಳೆ. ಅವಳ ಪರಮಾಸಕ್ತಿ ಇವನಿಗೆ ಮೆಚ್ಚಿಗೆ. ಅವಳು ಏಕಸಂಧಿಗ್ರಾಹಿ. ತಾನು ನುಡಿಸಿ ತೋರಿದ್ದನ್ನು ತಕ್ಷಣವೇ ನುಡಿಸಿ ತೋರಬಲ್ಲ ಚಾಣಾಕ್ಷೆ. ಇಂಥವಳು ಜ್ಯೂನಿಯರ್ ಪರೀಕ್ಷೆಯಲ್ಲಿ ಫಸ್ಟ್‌ರ್‍ಯಾಂಕ್ ಬಂದು ಶಾಲೆಗೂ, ಇವನಿಗೂ ಊರಿಗೂ ಹೆಸರು ತಂದು ಕೊಟ್ಟಾಗ ಇಡೀ ಧರ್ಮಶಾಲೆ ರಸ್ತೆಯೇ ನಳನಳಿಸಿತ್ತು. ಸೀನಿಯರ್‌ಗೂ ಬರಲಾರಂಭಿಸಿದಳು. ಇವಳು ಕಛೇರಿ ಮಾಡಲೆಂದೇ ಹುಟ್ಟಿದ ಸಂಸ್ಕಾರವಂತೆಯೆಂದು ಅವನೂ ತನ್ನಲಿದ್ದುದನ್ನೆಲ್ಲಾ ಧಾರೆ ಎರೆಯಲಾರಂಭಿಸಿದ. ಅವಳು ಟ್ಯೂಶನ್ ಬಗ್ಗೆ ಹೆಚ್ಚು ಆಸಕ್ತಿ ತೋರಿ ತನ್ನನ್ನು ಮರೆತುಬಿಡುತ್ತಾಳೋ ಎಂದು ತರಹೇವಾರಿ ಡ್ರೆಸ್ ಮಾಡಿಕೊಂಡು ಬಂದ. 'ಇದೆಲ್ಲಾ ನಿಮಗೆ ಸೂಟ್ ಆಗೋಲ್ಲ ಸರ್. ಕೋತಿ ಥರಾ ಕಾಣ್ತೆರಾ. ಟೀಶರ್ಟ್ ಜರ್ಕಿನ್‌ಗಿಂತ ಜುಬ್ಬಾದಲ್ಲೇ ವಾಸಿ' ಅಂದಳು. ಅವಳ ಆಳ್ತನದ ಎದುರು ತಾನು ಪೀಚೆಂದೆನ್ನಿಸುವಾಗ ಮದಕರಿ ವ್ಯಾಯಾಮಶಾಲೆಗೆ ಎಡತಾಕಿ ವೇಟ್‌ಲಿಫ್ಟ್ ಮಾಡಿದ; ಕೋಟೆ ಹತ್ತಿ ಗೋಪಾಲಸ್ವಾಮಿ ಹೊಂಡದಲ್ಲಿ ಸ್ವಿಮ್‌ಗೆ ಬಿದ್ದ. ಬಾಡಿ ಫಿಟ್‌ನೆಸ್‌ಗಾಗಿ ಹಪಹಪಿಸುತ್ತಾ ಮತ್ತಷ್ಟು ಕಸರತ್ತು ಮಾಡಿ ಒಂದಿಷ್ಟು ದಪ್ಪಗಾದ. ಅವಳೆದುರು ಎದೆಯುಬ್ಬಿಸಿ ಬೈಸೆಪ್ಸ್ ತೋರಿದ. ಅವಳು ನಕ್ಕುಬಿಟ್ಟಳು. 'ಸಾರಿ ಸರ್, ಸಂಗೀತ ಮಾಸ್ಟರ್ಸ್ ಫೈಟ್ ಮಾಸ್ಟರ್ಸ್ ಥರಾ ಇರಬಾರ್ದು ಸರ್. ನೀವು ಮೊದ್ಲೇ ಹ್ಯಾಂಡ್‌ಸಮ್ ಆಗಿದ್ದೀರಿ' ಎಂದು ಜರಿದಾಗಲಂತೂ ತಬ್ಬಿಬ್ಬಾದ. 'ಅಯ್ಯಯ್ಯೋ! ದಪ್ಪಗಾಗಿ ಬಿಟ್ನಾ? ಹಾಗಾದ್ರೆ ಯೋಗ ಮಾಡಿದ್ರೆ ವಾಸಿ, ನಾನಂತೂ ಮಲ್ಲಾಡಿಹಳ್ಳಿಗೆ ಹೋಗಿ ಬಿಡ್ತೀನಿ... ಸ್ವಲ್ಪದಿನ ಕಣ್ರೆ' ಪೇಚಾಡಿದ. 'ಅಯ್ಯಯ್ಯೋ! ಹಾಗಾದ್ರೆ ನಮಗೆ ಟ್ಯೂಶನ್ ಮಾಡೋರು ಯಾರು?' ಇಷ್ಟಗಲ ಕಣ್ಣರಳಿಸಿ ಬಾಯ್ತೆರೆದಳು.

'ನಮ್ಮಜ್ಜ ಇರ್ತಾರಲ್ಲಾರೀ... ಒಂದುವಾರ ಅಷ್ಟೇ' ಅಂದು ನಕ್ಕ. 'ಯೋಗ ಕಲಿತು ಬಂದು ಬಿಡ್ತೀನಿ' ಎಂದೂ ಸಂತೈಸಿದ. 'ನೊ ಸರ್, ಎಲ್ಲಿ ಹೋಗೋದೂ ಬೇಡ. ನೀವು ಹೇಗಿದ್ರೂ ಫೈನೇ' ಎಂದು ಕಣ್ಣುಗಳಲ್ಲೇ ಆಪೋಶನ ತೆಗೆದುಕೊಂಡಳು. ಮಲ್ಲಾಡಿಹಳ್ಳಿ ಕ್ಯಾಂಪ್ ಮಾಡದೆ, ಸರಿಯಾಗಿ ಊಟ ತಿಂಡಿ ಮಾಡದೆ ಪುನಃ ಮೊದಲಿನಂತಾದ. ಈಗ ಅವಳ ರಿಯಾಕ್ಷನ್ ಹೀಗಿತ್ತು: 'ನೀವೀಗ ಒಳ್ಳೆ ಹಿಂದಿ ಫಿಲಂ ಸ್ಟಾರ್ ಥರಾ ಸ್ಮಾರ್ಟ್ ಸರ್. ಕನ್ನಡದವರ ಥರಾ ಊದ್ಕೊಂಡಿಲ್ಲ.' ಅವಳಂದಾಗ ಪ್ಯಾರಾಚ್ಯೂಟ್ ಕಟ್ಟಿಕೊಂಡು ಹೇವನ್‌ಗೇ ಹಾರಿದ. ಇಬ್ಬರೂ ಸೇರಿ ಅಲ್ಲೇ ಸುನಾದ ವಿನೋದಿನಿರಾಗ ಪ್ರಾಕ್ಟೀಸ್ ಮಾಡಿದರು. ಅವಳು ಕಾಲೇಜಿಗೆ ಹೋಗಿ ಬರುವ ಹಾದಿಯಲ್ಲಿ ಅಂಗಡಿ